ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಮಡಿಕೇರಿ

ಸಿ.ಸಿ.ಸಂಖ್ಯೆ: **1187/2023**

ಪಿರ್ಯಾದಿ: ರಾಜ್ಯದ ಪರವಾಗಿ
ಕೊಡಗು ಮಹಿಳಾ ಆರಕ್ಷಕ ಠಾಣೆ

ವಿರುದ್ಧ

ಆರೋಪಿ/ಗಳು: ಹರೀಶ ಮತ್ತು ಇತರರು

## : ದೋಷಾರೋಪಣೆ :

ಶ್ರೀಮತಿ ವಿನುತ ಡಿ.ಎಸ್. ಬಿ.ಎಸ್.ಸಿ. (ಸೆರಿಕಲ್ಚರ್), ಎಲ್.ಎಲ್.ಬಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಮಡಿಕೇರಿ ಆದ ನಾನು ಆರೋಪಿಯಾದ

1. ಹರೀಶ,
ತಂದೆ: ಶಿವಪ್ಪ ಎಸ್ ಎಸ್,
ಪ್ರಾಯ 35 ವರ್ಷ,
ವಾಸ: 1ನೇ ಮನೆ, 3ನೇ ಕ್ರಾಸ್, ಸಾಯಿ ಲೆಔಟ್, 4ನೇ ಬ್ಲಾಕ್, ಕುಶಾಲನಗರ ತಾಲ್ಲೂಕು.

2. ದೊಡ್ಡಮ್ಮ @ ಪಾರ್ವತಿ, ಗಂಡ: ಶಿವಪ್ಪ ಎಸ್ ಎಸ್,
61 ವರ್ಷ, ವಾಸ: ಕೂಡಿಗೆ ಗ್ರಾಮ ಮತ್ತು ಅಂಚೆ,
ಕುಶಾಲನಗರ.

3. ಶಿವಪ್ಪ ಎಸ್ ಎಸ್ (ಮೃತ ಪಟ್ಟಿರುತ್ತಾರೆ)

4. ಮಹೇಶ ಎಸ್ ಎಸ್, ತಂದೆ: ಶಿವಪ್ಪ ಎಸ್ ಎಸ್,
28 ವರ್ಷ, ವಾಸ: ಕೂಡಿಗೆ ಗ್ರಾಮ ಮತ್ತು ಅಂಚೆ,
ಕುಶಾಲನಗರ.

5. ಶಿಲ್ಪಾ ಎಸ್ ಎಸ್, ತಂದೆ: ಶಿವಪ್ಪ ಎಸ್ ಎಸ್,
31 ವರ್ಷ, ಪಿರಿಯಾಪಟ್ಟಣ ನಗರ, ಮೈಸೂರು ಜಿಲ್ಲೆ.

6. ಗಿರೀಶ್ ಪಿ ಎಮ್, ತಂದೆ: ಮುತ್ತಪ್ಪ ಪಿ ವೈ,
43 ವರ್ಷ, ವಾಸ: ನಂ.840 ದೊಡ್ಡಬೀದಿ,
ಪಿರಿಯಾಪಟ್ಟಣ ನಗರ, ಮೈಸೂರು ಜಿಲ್ಲೆ.

ನಿಮ್ಮ ವಿರುದ್ಧ ರೂಪಿಸಿರುವ ದೋಷಾರೋಪಣೆ ಏನೆಂದರೆ,

1ನೇ ಆರೋಪಿಯಾದ ನೀವು ಆರೋಪಿ-2 ಹಾಗೂ ಮೃತ 3ನೇ ಆರೋಪಿಯ ಮಗನಾಗಿದ್ದು 1ನೇ ಅರೋಪಿಯಾದ ನೀವು ಚಾಸಾ-1 ಸೌಮ್ಯಾ ರವರನ್ನು ದಿನಾಂಕ **17.05.2019** ರಂದು ಕುಶಾಲನಗರದ ಮಾರುತಿ ಕಲ್ಯಾಣ ಮಂಟಪದಲ್ಲಿ ಹಿಂದೂ ಸಂಪ್ರದಾಯಂತೆ ಗುರುಹಿರಿಯರ ಮತ್ತು ಸಂಬಂಧಿಕರ ಸಮ್ಮುಖದಲ್ಲಿ ಮದುವೆಯಾಗಿದ್ದು ಸುಮಾರು 9 ತಿಂಗಳ ಕಾಲ

ಚೆನ್ನಾಗಿ ನೋಡಿಕೊಂಡು ನಂತರದ ದಿನಗಳಲ್ಲಿ ವರದಕ್ಷಿಣೆ ತರುವಂತೆ ಒತ್ತಾಯಿಸುತ್ತಾ ವರದಕ್ಷಿಣೆ ತರದಿದ್ದಲ್ಲಿ ಮನೆ ಬಿಟ್ಟು ಹೋಗು ಎಂದು ಜಗಳ ತೆಗೆಯುತ್ತಾ ಚಾಸಾ-1 ರವರಿಗೆ ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆಯನ್ನು ನೀಡುತ್ತಿದ್ದು ಆ ಮೂಲಕ ನೀವು ಭಾದಂಸಂಕಲಂ 498(ಎ) ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಆರೋಪಿಗಳಾದ ನೀವುಗಳು ಮೇಲ್ಕಂಡ ಕೃತ್ಯವನ್ನು ಸಮಾನ ಉದ್ದೇಶದಿಂದ ಮುಂದುವರೆಸುತ್ತಾ ದಿನಾಂಕ 14.02.2020 ರಂದು ರಾತ್ರಿ 9-00 ಗಂಟೆಗೆ ಕೂಡಿಗೆ ಗ್ರಾಮದಲ್ಲಿ 2 ನೇ ಅರೋಪಿತೆಯಾದ ನಿಮಗೆ ಸೇರಿದ ವಾಸದ ಮನೆಯಲ್ಲಿ ಚಾಸಾ-1 ರವರ ಆಧಾರ್ ಕಾರ್ಡ್ ಕೊಡಲು ತಡವಾದ ವಿಚಾರದ ಬಗ್ಗೆ 2 ರಿಂದ 5 ನೇ ಅರೋಪಿಗಳಾದ ನೀವು ಚಾಸಾ-1 ರವರೊಡನೆ ಜಗಳ ತೆಗೆದಿದ್ದು ಅ ಸಮಯದಲ್ಲಿ 2 ನೇ ಅರೋಪಿತೆಯಾದ ನೀವು ಚಾಸಾ-1, ಚಾಸಾ-2 ಹಾಗೂ ಚಾಸಾ-3 ರವರನ್ನು ಉದ್ದೇಶಿಸಿ ಬೇವರ್ಸಿ ಮುಂಡೆಯರು, ಸೂಳೇ ಮಗ ಎಂದು ಹಾಗೂ ದಿನಾಂಕ 18.05.2020 ರಂದು ಚಾಸಾ-1 ರಿಂದ 3 ರವರಿಗೆ ಸೂಳೆಯರಿಗೆ ಹುಟ್ಟಿದ ಮಕ್ಕಳು ಎಂದು ಹಾಗೂ 2020 ನೇ ಇಸವಿ ಮೇ ತಿಂಗಳ ಕೊನೆಯ ವಾರದಲ್ಲಿ ಒಂದು ದಿನ ಸಂಜೆ 6-45 ಗಂಟೆಗೆ ಚಾಸಾ-2 ಮತ್ತು 3 ರವರು ವಾಸವಿರುವ ಚಾಸಾ-9 ರವರಿಗೆ ಸೇರಿದ ಮನೆಯಲ್ಲಿ ಸಂಜೆ 7-00 ಗಂಟೆಗೆ 5 ನೇ ಹಾಗೂ 6 ನೇ ಆರೋಪಿಗಳಾದ ನೀವು ಚಾಸಾ-1 ರವರಿಗೆ ಬೇವರ್ಸಿ ಮುಂಡೆ, ಚಾಸಾ-2 ರವರಿಗೆ ಲೋಪರ್ ಇದ್ದೀಯಾ ಕಚ್ಚಡ ನನ್ನ ಮಗ ಸೂಳೆಗೆ ಹುಟ್ಟಿದ್ದೀಯ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ನೀವು ಭಾದಂಸಂಕಲಂ 504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ ಆರೋಪಿಗಳಾದ ನೀವುಗಳು ಮೇಲ್ಕಂಡ ಕೃತ್ಯವನ್ನು ಸಮಾನ ಉದ್ದೇಶದಿಂದ ಮುಂದುವರೆಸುತ್ತಾ ದಿನಾಂಕ 18.05.2020 ರಾತ್ರಿ 9-00 ಗಂಟೆಗೆ ಕುಶಾಲನಗರದ ಸಾಯಿ ಬಡಾವಣೆಯಲ್ಲಿ 2 ನೇ ಅರೋಪಿತೆಗೆ ಸೇರಿದ ಚಾಸಾ-1 ರವರು ವಾಸ ಮಾಡುವ ಮನೆಯಲ್ಲಿ 1 ನೇ ಆರೋಪಿಯಾದ ನೀವು ಚಾಸಾ-1 ರವರ ಜೊತೆ ಜಗಳ ತೆಗೆದು ಮನೆ ಕ್ಲೀನ್ ಮಾಡಲು ಮತ್ತು 1 ನೇ ಅರೋಪಿಯಾದ ನೀವು ಮತ್ತು ನಿಮ್ಮ ಸ್ನೇಹಿತರ ಒಳ ಉಡುಪುಗಳನ್ನು ಒಗೆಯಲು ಹೇಳಿ ಹಿಂಸೆ ನೀಡಿದ್ದು ಇದಕ್ಕೆ ಚಾಸಾ-1 ರವರು ಒಪ್ಪದಿದ್ದಾಗ ಚಾಸಾ-1 ರವರ ಕೆನ್ನೆಗೆ ಕೈಯಿಂದ ಹೊಡೆದು ಕಾಲಿನಿಂದ ಸೊಂಟಕ್ಕೆ ಒದ್ದು ನೋವು ಪಡಿಸಿದ್ದು ಹಾಗೂ ನಂತರ 2020 ನೇ ಇಸವಿ ಜೂನ್ ತಿಂಗಳ 2 ನೇ ವಾರದಲ್ಲಿ ಒಂದು ದಿನ ಸಂಜೆ 7-00 ಗಂಟೆಗೆ ಕೂಡಿಗೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಡುವ 2 ನೇ ಆರೋಪಿತೆಗೆ ಸೇರಿದ ವಾಸದ ಮನೆಯಲ್ಲಿ 2 ರಿಂದ 6 ನೇ ಅರೋಪಿಗಳಾದ ನೀವುಗಳು ಚಾಸಾ-1 ರವರಿಗೆ ಇಲ್ಲಿಗೆ ಯಾಕೆ ಬಂದೆ ಎನ್ನುತ್ತಾ 6 ನೇ ಅರೋಪಿಯಾದ ನೀವು ಚಾಸಾ-1 ರವರನ್ನು ಕುರಿತು ನಾವು ಎಷ್ಟೇ ಹಿಂಸೆ ಕೊಟ್ಟರೂ ಅದನ್ನೆಲ್ಲಾ ಸಹಿಸಿಕೊಳ್ಳಬೇಕು, ಒಂದು ವೇಳೆ ನಾವು ನಿನ್ನನ್ನು

ಸಾಯಿಸಿದರೂ ನೀನು ಸಾಯಬೇಕು ಎಂದು ಹೇಳಿ ಚಾಸಾ-1 ರವರ ಕೈಯ್ಯನ್ನು ಹಿಡಿದು ಎಳೆದಾಡಿ ಬೆನ್ನಿಗೆ ಎಡ ರಟ್ಟೆಗೆ ಕೆನ್ನೆಗೆ ಹೊಡೆದು ಸೊಂಟಕ್ಕೆ ಒದ್ದು ಹಲ್ಲೆ ಮಾಡಿ ಅವಾಚ್ಯ ಶಬ್ಧಗಳಿಂದ ಬೈದಿದ್ದು ಆ ಮೂಲಕ ನೀವು ಭಾದಂಸಂಕಲಂ 323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿ ಆರೋಪಿಗಳಾದ ನೀವುಗಳು ಮೇಲ್ಕಂಡ ಕೃತ್ಯವನ್ನು ಸಮಾನ ಉದ್ದೇಶದಿಂದ ಮುಂದುವರೆಸುತ್ತಾ 1 ನೇ ಆರೋಪಿಯಾದ ನೀವು ಹಾಗೂ ನಿಮ್ಮ ಸ್ನೇಹಿತರು ಮದ್ಯಪಾನ ಮಾಡಿ ಬಿಟ್ಟಿದ್ದ ಗಾಜಿನ ಲೋಟಗಳನ್ನು ಒಡೆದು ಹಾಕಿ ಆ ಗಾಜಿನಲ್ಲಿ ಚಾಸಾ-1 ರವರನ್ನು ಹಲ್ಲೆ ಮಾಡಲು ಮುಂದಾದಾಗ ಚಾಸಾ-1 ರವರ ಎರಡು ಕೈಯ್ಯ ಬೆರಳುಗಳಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು ಆ ಮೂಲಕ ನೀವು ಭಾದಂಸಂಕಲಂ 324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಐದನೇಯದಾಗಿ ಆರೋಪಿಗಳಾದ ನೀವುಗಳು ಮೇಲ್ಕಂಡ ಕೃತ್ಯವನ್ನು ಸಮಾನ ಉದ್ದೇಶದಿಂದ ಮುಂದುವರೆಸುತ್ತಾ 18.05.2020 ರಂದು ರಾತ್ರಿ 9-00 ಗಂಟೆ ಸಮಯದಲ್ಲಿ ಚಾಸಾ-1 ರಿಂದ 3 ರವರನ್ನು ಕೊಲ್ಲುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದ್ದು ಆ ಮೂಲಕ ನೀವು ಭಾದಂಸಂಕಲಂ 506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಆರನೇಯದಾಗಿ ಆರೋಪಿಗಳಾದ ನೀವುಗಳು ಮೇಲ್ಕಂಡ ಕೃತ್ಯವನ್ನು ಸಮಾನ ಉದ್ದೇಶದಿಂದ ಮುಂದುವರೆಸುತ್ತಾ 2 ರಿಂದ 5 ನೇ ಆರೋಪಿಗಳಾದ ನೀವುಗಳು 1 ನೇ ಅರೋಪಿಯಾದ ನಿಮಗೆ ಚಾಸಾ-1 ರವರಿಗೆ ಹೊಡೆದು ಹಿಂಸೆ ನೀಡು ಆಗ ಅವಳು ಮನೆ ಬಿಟ್ಟು ಹೋಗುತ್ತಾಳೆ ಎಂದು 1 ನೇ ಅರೋಪಿಯಾದ ನಿಮಗೆ ಚಾಸಾ-1 ರವರ ಮೇಲೆ ಹಲ್ಲೆ ಮಾಡುವಂತೆ ಕುಮ್ಮಕ್ಕು ನೀಡುತ್ತಿದ್ದು ನೀವು ಭಾದಂಸಂಕಲಂ 114 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಏಳನೇಯದಾಗಿ ಆರೋಪಿಗಳಾದ ನೀವುಗಳು ಮೇಲ್ಕಂಡ ಕೃತ್ಯವನ್ನು ಸಮಾನ ಉದ್ದೇಶದಿಂದ ಮುಂದುವರೆಸುತ್ತಾ 18.05.2020 ರಂದು ರಾತ್ರಿ 9-00 ಗಂಟೆ ಸಮಯದಲ್ಲಿ ಚಾಸಾ-1 ರಿಂದ 3 ರವರನ್ನು ಕೊಲ್ಲುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದ್ದು ಅಲ್ಲದೇ 1 ನೇ ಅರೋಪಿಯಾದ ನೀವು ಚಾಸಾ-1 ರವರಿಗೆ ಮನೆ ಬಿಟ್ಟು ಹೋಗು, ನೀನು ಮನೆ ಬಿಟ್ಟು ಹೋಗದೇ ಇದ್ದರೆ ಐದು ಜನರನ್ನು ಕರೆಯಿಸಿ ನಿನ್ನ ಮೇಲೆ ಅತ್ಯಾಚಾರ ಮಾಡಿಸಿ ನಿನ್ನ ಮೈ ಮೇಲೆ ಇರುವ ಬಟ್ಟೆಯನ್ನು ತೆಗೆದು ನಿನ್ನನ್ನು ಬರಿ ಮೈಯ್ಯಲ್ಲಿ

ರಸ್ತೆಯಲ್ಲಿ ನಿಲ್ಲಿಸುತ್ತೇನೆ ಎಂದು ಮಾನಸಿಕ ಹಿಂಸೆ ನೀಡಿ ಕೊಲೆ ಬೆದರಿಕೆ ಹಾಕಿದ್ದು ನೀವು ಭಾದಂಸಂಕಲಂ 506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೇಯದಾಗಿ ಆರೋಪಿಗಳಾದ ನೀವುಗಳು ಮೇಲ್ಕಂಡ ಕೃತ್ಯವನ್ನು ಸಮಾನ ಉದ್ದೇಶದಿಂದ ಮುಂದುವರೆಸುತ್ತಾ ಚಾಸಾ-1 ರವರಿಗೆ ವರದಕ್ಷಿಣೆ ತರುವಂತೆ ಒತ್ತಾಯಿಸುತ್ತಾ ಚಾಸಾ-1 ರವರಿಗೆ ಹಿಂಸೆ ನೀಡಿದ್ದು ಆ ಮೂಲಕ ನೀವು ಕಲಂ 3 ಮತ್ತು 4 ವರದಕ್ಷಿಣೆ ನಿಷೇಧಾ ಕಾಯ್ದೆ ರಡಿಯಲ್ಲಿರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಆಪಾದನೆಯು ಆರೋಪಿಯಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕ 19.07.2025

ಪ್ರಧಾನ ಸಿವಿಲ್ ಜಡ್ಜ್ ಮತ್ತು
ಜೆ.ಎಂ..ಎಫ್.ಸಿ., ಮಡಿಕೇರಿ.